ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್ ) |

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಬಳ್ಳಾಪುರ.**

**ಎಸ್.ಸಿ. ಸಂಖ್ಯೆ: 111/2021**

| | |
|---|---|
| PW | 5 |
| CW | 10 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **15.03.2024**

| | | |
|---|---|---|
| ಸಾಕ್ಷಿಯ ಹೆಸರು | : | ಮುನಿರಾಜು |
| ತಂದೆಯ/ಗಂಡನ ಹೆಸರು | : | ಅಂಬರೀಶ್ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಗೌರಿಬಿದನೂರು |

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ

1. ಮೃತ ವಿಶ್ವನಾಥ ಗೊತ್ತಿಲ್ಲ. ಚಾಸಾ -1 ರಿಂದ 9 ಗೊತ್ತಿಲ್ಲ. ಚಾಸಾ - 11 ರಿಂದ 15 ಗೊತ್ತಿಲ್ಲ. ಚಾಸಾ - 55 , 56 ಗೊತ್ತಿಲ್ಲ. ನ್ಯಾಯಾಲಯದ ಕಂಪ್ಯೂಟರ್ ನಲ್ಲಿ ಕಾಣಿಸುವ 1 ರಿಂದ 3 ನೇ ಆರೋಪಿಗಳು ಗೊತ್ತಿಲ್ಲ. 4 ನೇ ಆರೋಪಿ ಗೊತ್ತು. ಅವರು ನಮ್ಮ ಏರಿಯಾದವರು.

2) ಈಗ ತೋರಿಸಿದ ದ್ವಿಚಕ್ರ ಅಮಾನತ್ತು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ದಿಃ 05.08.2021 ರಂದು ಗೌರಿಬಿದನೂರಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸದರಿ ಸಹಿಯನ್ನು ಮಾಡಿರುತ್ತೇನೆ. ಪೊಲೀಸರು ನನ್ನ ದ್ವಿಚಕ್ರ ವಾಹನವನ್ನು ಠಾಣೆಗೆ ಹಾಜರುಪಡಿಸುವಂತೆ ತಿಳಿಸಿದರು, ನಾನು ಅದರಂತೆ ಅದನ್ನು

PW:5 CW:10

ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿದೆ. ಪೊಲೀಸರು ನನ್ನ ವಾಹನವನ್ನು ಯಾವ ಕಾರಣಕ್ಕಾಗಿ ಕೇಳಿದ್ದರು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿಕೊಳ್ಳಲಿಲ್ಲ. ಅದಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಲಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. 2 ನೇ ಆರೋಪಿಗೆ ನಾನು ನನ್ನ ದ್ವಿಚಕ್ರ ವಾಹನವನ್ನು ಕೊಟ್ಟಿರಲಿಲ್ಲ , ಅದನ್ನು ಅದು ಅತ ಎನು ಮಾಡಿದ ನನಗೆ ಗೊತ್ತಿಲ್ಲ.

**(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

3) ದಿಃ 04.07.2021 ರಂದು ರಂಗನಾಥರವರ ತಿಥಿ ಕಾರ್ಯಕ್ಕೆ ನಾನು ನನ್ನ ಡಿಯೋ ದ್ವಿಚಕ್ರ ವಾಹನದಲ್ಲಿ ಹೋಗಿದ್ದೆ ಎಂದರೆ ಸರಿಯಲ್ಲ. ಅಗ 2 ನೇ ಆರೋಪಿ ಮನೋಜ ನನ್ನ ದ್ವಿಚಕ್ರ ವಾಹನವನ್ನು ಕೊಡುವಂತೆ ಕೆಳಿದ ಎಂದರೆ ಸರಿಯಲ್ಲ. ನಾನು ಪೆಟ್ರೋಲ್ ಕಡಿಮೆ ಇದೆ ಎಂದು ಹೇಳಿದಾಗ 2 ನೇ ಆರೋಪಿ ನಾನೇ ಹಾಕಿಸಿಕೊಳ್ಳುತ್ತೇನೆ ಎಂದು ಹೇಳಿ ನನ್ನ ವಾಹನ ತೆಗೆದುಕೊಂಡು ಅಲ್ಲಿ ಇದ್ದ ಶ್ರೀಕಾಂತ್ ಮತ್ತು ಚರಣ್ ರಾಜ್ ರವರನ್ನು ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಅರ್ಧ ಗಂಟೆ ನಂತರ ಸದರಿ ವಾಹನವನ್ನು ನನಗೆ ವಾಪಸ್ಸು ಕೊಟ್ಟ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ ನಾನು ಮನೆಯಲ್ಲಿದ್ದಾಗ ಚಾಸಾ -6 ಮತ್ತು 2 ನೇ ಆರೋಪಿ ಕಾರು ಬಾಡಿಗೆಗೆ ಬರುವಂತೆ ಕರೆದರು ನಾನು ಅಗುವುದಿಲ್ಲ ಎಂದು ಹೇಳಿ ಕಳುಹಿಸಿದ್ದೆ ಎಂದರೆ ಸರಿಯಲ್ಲ.

**4)** ನಾನು ಈಗ ಓದಿ ಹೇಳಿದಂತೆ ''ದಿಃ 04.07.2021 ರಂದು ನದಿಗಡ್ಡೆಯ ರಂಗನಾಥ್ ಅಲಿಯಾಸ್ ರಂಗಣ್ಣರವರು ಮೃತಪಟ್ಟಿದ್ದರ ಹಿನ್ನಲೆಯಲ್ಲಿ ತಿಥಿ ಕಾರ್ಯ

..............................................................................................

..........................................................................................,......

PW:5 CW:10

.......................................................................ದಿಃ 05.07.2021

ರಂದು ನಾನು ಬಾಡಿಗೆಗೆ ಹೋದೆ " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ **- 5** ಎಂದು ಗುರುತಿಸಲಾಯಿತು.

**5)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ - 5 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು **:** ಶ್ರೀ**.**ಎಂ**.** ಎಸ್ **.** ಆರ್ ವಕೀಲರಿಂದ**,** ಆರೋಪಿ/ ತರ ಪರವಾಗಿಃ

**6)** ಏನೂ ಇಲ್ಲಾ.

ಮರುವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 15.03.2024 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ**/-**
ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

PW:5 CW:10

PW:5 CW:10